ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೩ನೇ ವರ್ಷ ೪ನೇ ಸಂಚಿಕೆ ಕೊಪ್ಪ ೧೬-೯-೧೯೮೪ ಭಾನುವಾರ ಬೆಲೆ ೪೦ ಪೈಸೆ

ಕೊಪ್ಪಕ್ಕೆ ಸೆಶನ್ಸ್ ನ್ಯಾಯಾಧೀಶರ ಭೇಟಿ

ಕೊಪ್ಪ: ಇಲ್ಲಿನ ತಾ. ಅ. ಮಂಡಳಿಗೆ ಸೇರಿದ ಕಟ್ಟಡವೊಂದನ್ನು ನ್ಯಾಯಾಲಯಕ್ಕೆ ಬೇಕಾದಂತೆ ಮಾರ್ಪಾಡುಗೊಳಿಸಿದ್ದು, ಸೆ. ೧೧ರಂದು ಅದನ್ನು ಪರಿಶೀಲಿಸಿದ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶ ಎಸ್.ಬಿ. ತಂಬದ್‌ರವರು ಸಂಪೂರ್ಣ ತೃಪ್ತಿ ವ್ಯಕ್ತಪಡಿಸಿದರು.

ನ್ಯಾಯಾಧೀಶರ ವಸತಿಗಾಗಿಯೂ ತಾ. ಅ. ಮಂಡಳಿಯೇ ಒದಗಿಸಲು ಮುಂದೆ ಬಂದಿರುವ ಒಂದು ನಿವಾಸವನ್ನೂ ಅವರು ಪರಿಶೀಲಿಸಿ ತೃಪ್ತಿ ವ್ಯಕ್ತಪಡಿಸಿದರು.

ಬಿಚ್ಚು ಮನಸ್ಸಿನ ಚರ್ಚೆ

ಸ್ಥಳ ಪರಿಶೀಲನೆಗೆ ಮೊದಲು ಅವರು, ತಾಲ್ಲೂಕಿನ ವಿವಿಧೆಡೆಗಳ, ವಿವಿಧ ಸಂಘ-ಸಂಸ್ಥೆ-ಪಕ್ಷಗಳ ಮುಖಂಡರು ಮತ್ತು ಪತ್ರಕರ್ತರನ್ನೊಳಗೊಂಡ ೨೦ಕ್ಕೂ ಹೆಚ್ಚು ಜನರಿದ್ದ ನಿಯೋಗದೊಂದಿಗೆ ಸುಮಾರು ಒಂದೂವರೆ ಗಂಟೆ ಕಾಲ ಮುಕ್ತವಾಗಿ ವಿಚಾರ ವಿನಿಮಯ ನಡೆಸಿದರು. "ನೀವು ಏನೇನು ವಾದ ಮುಂದಿಡುತ್ತೀರೋ, ಎಲ್ಲ ಕೇಳುತ್ತೇನೆ. ಏನೇನು ದಾಖಲೆ-ಸಾಕ್ಷ್ಯಾಧಾರ ತೋರಿಸಲಿಕ್ಕಿದೆಯೋ ಎಲ್ಲ ತೋರಿಸಿ, ನೋಡುತ್ತೇನೆ" ಎಂದ ಅವರು, ಸಭಿಕರೆಲ್ಲರ ಎಲ್ಲ ತರದ ಅಭಿಪ್ರಾಯಗಳನ್ನೂ ಹೊರಗೆಡಹಲು ಅವಕಾಶ ಕೊಟ್ಟು, ಸಾವಧಾನದಿಂದ ಕೇಳಿದರು; ಕೆಲವಕ್ಕೆ ಅಲ್ಲೇ ಉತ್ತರಿಸಿದರು. (೪ನೇ ಪುಟಕ್ಕೆ)

ಮನೆ ಬಾಗಿಲಲ್ಲಿ ನಲ್ಲಿಯಿದ್ದೂ ಹೊಳೆಯಿಂದ ನೀರು ಹೊತ್ತರು!

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಇಲ್ಲಿಗೆ ಸಮೀಪದ ವೈಕುಂಠಪುರದಲ್ಲಿ ಸುದ್ದಿ-ಸಡಗರದೊಂದಿಗೆ ಈಚೆಗಷ್ಟೆ ಆರಂಭವಾಗಿದ್ದ ನಲ್ಲಿ ನೀರಿನ ಯೋಜನೆ ಶುರುವಿನಿಂದಲೂ ಕಷ್ಟದಲ್ಲೇ ನಡೆಯುತ್ತಿದ್ದು, ಕಳೆದ ೧ ತಿಂಗಳ ಹಿಂದೆ ನೀರು ಬರುವುದು ಸಂಪೂರ್ಣ ನಿಂತು ಹೋಗಿತ್ತು. ಸಂಬಂಧಪಟ್ಟವರಿಗೆ ತಿಳಿಸಿದ್ದಕ್ಕೆ ೨೦ ದಿನದ ನಂತರ ಬಂದು ರಿಪೇರಿಯ ಶಾಸ್ತ್ರ ಮಾಡಿದರು. ಆದರೂ ಸರಿಯಾಗಲಿಲ್ಲ.

ಈಗ ಊರವರು ಮನೆ ಬಾಗಿಲಲ್ಲಿ ನಲ್ಲಿ ಇದ್ದೂ ಹೊಳೆಯಿಂದ ನೀರು ಹೊರುತ್ತಿದ್ದಾರೆ.

ಕೊಪ್ಪದ ಪ್ರ. ದ. ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆಯ ಹಾದಿಯತ್ತ?

ಕೊಪ್ಪ: ಇಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅರಂಭವಾಗಿ ೩ನೇ ವರ್ಷ ನಡೆಯುತ್ತಿದ್ದರೂ ಉಪನ್ಯಾಸಕರಾದಿಯಾಗಿ ಇತರ ಯಾವುದೇ ಸೌಲಭ್ಯಗಳೂ ಇಲ್ಲದಿರುವ ಬಗ್ಗೆ ವಿದ್ಯಾರ್ಥಿಗಳು ಆತಂಕಗೊಂಡು ಪ್ರತಿಭಟನೆಗೆ ಸಜ್ಜಾಗಿದ್ದಾರೆ.

ಈ ಬಗ್ಗೆ ಕಾಲೇಜಿನ ಪ್ರಿನ್ಸಿಪಾಲರಿಗೆ, ಮೈಸೂರು ವಿ. ವಿ. ಉಪಕುಲಪತಿಗಳಿಗೆ, ವಿದ್ಯಾ ಮಂತ್ರಿಗಳು, ಶಾಸಕರು ಮತ್ತು ಇತರ ಅಧಿಕಾರಿಗಳಿಗೆ ಅ. ಭಾ. ವಿದ್ಯಾರ್ಥಿ ಪರಿಷತ್ತಿನ ಕೊಪ್ಪ ಶಾಖೆಯ ಮೂಲಕ ಮನವಿ ಸಲ್ಲಿಸಿದ್ದು, ೧೫ ದಿನದೊಳಗೆ ಸಮಸ್ಯೆಗಳ ಇತ್ಯರ್ಥದ ಸೂಚನೆಗಳು ಕಾಣದಿದ್ದಲ್ಲಿ ಚಳುವಳಿಗೆ ಇಳಿಯಬೇಕಾಗುವ ಎಚ್ಚರಿಕೆಯನ್ನೂ ನೀಡಿದ್ದಾರೆನ್ನಲಾಗಿದೆ.

ಉಪನ್ಯಾಸಕರ ಕೊರತೆ

ಈಗ ಪ್ರಿನ್ಸಿಪಾಲರು ಮತ್ತು ವಾಣಿಜ್ಯ ಶಾಸ್ತ್ರದ ಒಬ್ಬರು ಉಪನ್ಯಾಸಕರು ಮಾತ್ರ ಖಾಯಂನವರಾಗಿದ್ದು, ಉಳಿದವರೆಲ್ಲ ಸ್ಥಳೀಯ ಅಥವಾ ಕಾಂಟ್ರ್ಯಾಕ್ಟ್ ಅಭ್ಯರ್ಥಿಗಳಾಗಿದ್ದಾರೆ. ಕನ್ನಡ ಮತ್ತು ಅರ್ಥಶಾಸ್ತ್ರ ಬಿಟ್ಟು ಉಳಿದೆಲ್ಲ ಶಾಖೆಗಳಲ್ಲೂ ಉಪನ್ಯಾಸಕರ ಕೊರತೆಯಿದೆ. ವಾಣಿಜ್ಯ ಶಾಸ್ತ್ರದಲ್ಲಂತೂ ೪ ಅಥವಾ ೫ ಸ್ಥಾನ ಖಾಲಿಯಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.

ಈ ಹಂಗಾಮಿ ಉಪನ್ಯಾಸಕರೆಲ್ಲ ಬೇರೆ ಕಡೆ ಕೆಲಸ ಸಿಕ್ಕಿದಾಗ ಹೊರಟು ಹೋಗುವುದರಿಂದ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದೆಯೆಂದು ವಿದ್ಯಾರ್ಥಿಗಳು ಮನವಿಯಲ್ಲಿ ತಿಳಿಸಿದ್ದಾರೆ.

ಕ್ರೀಡಾ ಚಟುವಟಿಕೆ ಸೊನ್ನೆ

ಕಾಲೇಜಿನಲ್ಲಿ ದೈಹಿಕ ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ಆಟೋಟಗಳಲ್ಲಿ ಮಾರ್ಗದರ್ಶನವೆ ಇಲ್ಲವಾಗಿದೆ. ಕ್ರೀಡಾ ಸಾಮಗ್ರಿಗಳೂ ಇಲ್ಲ. (೪ನೇ ಪುಟಕ್ಕೆ)

ಕೊಪ್ಪದಲ್ಲಿ ಸೀಮೆಣ್ಣೆ ಪೂರೈಕೆಯೂ ಹಂಚಿಕೆಯೂ ಕೈಕೊಟ್ಟು ಅತೋಭ್ರಷ್ಟ ತತೋಭ್ರಷ್ಟರಾದ ಗ್ರಾಹಕರು

ಕೊಪ್ಪ: ಇಲ್ಲಿ ಸೀಮೆಯೆಣ್ಣೆಯ ಸರಬರಾಜು ಮತ್ತು ಹಂಚಿಕೆ ಇನ್ನೂ ಅತೃಪ್ತಿಕರವಾಗಿಯೇ ಮುಂದುವರಿಯುತ್ತಿದೆ. ಗೌರಿ-ಗಣೇಶನ ಹಬ್ಬದ ಹೊತ್ತಿಗೇ ಸೀಮೆಯೆಣ್ಣೆ ಇರಲಿಲ್ಲ.

ಕೊಪ್ಪ ಪೇಟೆಗೇ ತಿಂಗಳಿಗೆ ೩ ಲಾರಿ ಸೀಮೆಯೆಣ್ಣೆ ಬೇಕು. ಆದರೆ ತಿಂಗಳಿಗೆ ೨ ಲಾರಿ ಬರುವುದೂ 'ಹರಹರ'ವಾಗುತ್ತಿದೆ.

ಗಣಪತಿ ಹಬ್ಬಕ್ಕೆ ೧೫ ದಿನ ಮುಂಚೆ ಬಂದಿದ್ದ ಸೀಮೆಯೆಣ್ಣೆ ಪುನಃ ದರ್ಶನ ಕೊಟ್ಟಿದ್ದು ಹಬ್ಬ ಕಳೆದು ೫ ದಿನದ ಮೇಲೆಯೇ (ಸೆ. ೫.) ಈಗ ಮತ್ತೆ ತಾರೀಕು ೧೬ ಆದರೂ ಸೀಮೆ ಎಣ್ಣೆ ಬಂದಿಲ್ಲ.

ಆದರೆ ತಾ|| ಕಚೇರಿಯವರು ಸೀಮೆಎಣ್ಣೆ ಬೇಕಾದಷ್ಟು ಸಿಗುತ್ತಿದೆಯೆಂದುಕೊಂಡಿದ್ದಾರೆ. ಈಚೆಗೆ ತಹಸೀಲ್ದಾರರಿಗೆ ಕೊರತೆ ಬಗ್ಗೆ ತಿಳಿಸಿದಾಗ ಅವರ ಪ್ರತಿಕ್ರಿಯೆ ಬರೀ "ಹೌದಾ?" ಎಂದಷ್ಟೇ ಆಗಿತ್ತು!

ಜುಲೈ ೨೨ರ 'ಮುಂಜಾವು' ಈ ಬಗ್ಗೆ ವರದಿ ಪ್ರಕಟಿಸಿದಾಗ, ಇಲ್ಲಿಗೆ ಸೀಮೆ ಎಣ್ಣೆ ಸರಬರಾಜು ಮಾಡುವ ಲಾರಿಯವರ ಕುಟುಂಬದಲ್ಲಿ ಅದೇ ವೇಳೆಗೆ ಹಿರಿಯರೊಬ್ಬರ ನಿಧನ ಮತ್ತು ಲಾರಿಗಳು ಶಿರಾಡಿ ಘಾಟಿ ಸುತ್ತಿ ಬರಬೇಕಾಗಿರುವುದು ಸರಬರಾಜಿನ ಏರುಪೇರಿಗೆ ಕಾರಣವೆಂದೂ, ಸದ್ಯದಲ್ಲೇ ಕ್ರಮಬದ್ಧಗೊಳ್ಳುವುದೆಂದೂ ತಹಸೀಲ್ದಾರ್ ತಿಳಿಸಿದ್ದರು. ಆದರೆ ೨ ತಿಂಗಳು ಕಳೆದರೂ ಪರಿಸ್ಥಿತಿ ಹಾಗೇ ಇದೆ. ಪೇಟೆಯಲ್ಲೇ ಹೀಗಾದರೆ ಇನ್ನು ಗ್ರಾಮಾಂತರದಲ್ಲಿ ಪೂರೈಕೆ ಹೇಗಿದ್ದೀತು?

ಹಂಚಿಕೆಯೂ ಅಸಮರ್ಪಕ

ಅಂಗಡಿಗಳವರು ಸೀಮೆಎಣ್ಣೆ ಸರಿಯಾಗಿ ಹಂಚುತ್ತಿಲ್ಲವೆಂದು, ಸೊಸೈಟಿಗಳಿಗೆ ಸೀಮೆ ಎಣ್ಣೆ ಹಂಚಿಕೆ ಹೆಚ್ಚೆಚ್ಚು ವಹಿಸುವುದಾಗಿ ತಹಸೀಲ್ದಾರ್ ಹೇಳಿದ್ದರು. ಬಹುಶಃ ಅದೇ ಕಾರಣಕ್ಕೆ ಅಂಗಡಿಗಳವರಿಗೆ ಪೂರೈಕೆಯನ್ನು ತೀವ್ರವಾಗಿ ಕಡಿತಗೊಳಿಸಿ ೧೦೦-ಲೀಟರಿಗೆ ಇಳಿಸಿದ್ದಾರೆ. ವಿಪರ್ಯಾಸವೆಂದರೆ, ಸೀಮೆಯೆಣ್ಣೆ ಅಥವಾ ಪಡಿತರ ಹಂಚಿಕೆಯಲ್ಲಿ ಈವರೆಗೆ ಅಷ್ಟೇನೂ ದೂರುಗಳಿಲ್ಲದವರಿಗೇ ಈ ಕಡಿತ ಬಿಗಿಯಾಗಿದ್ದು, ಅದರಲ್ಲಿ ಅಪಖ್ಯಾತಿ ಇರುವವರಿಗೆ ೪೦೦-೫೦೦ ಲೀಟರ್‌ವರೆಗೂ ಸಿಗುತ್ತಿದೆಯಂತೆ.

ಹಂಚಿಕೆಯಲ್ಲಿನ ಇನ್ನೊಂದು ಮುಖ್ಯ ಸಮಸ್ಯೆಯೆಂದರೆ, ಕೆಲವು ಸೊಸೈಟಿಗಳಲ್ಲಿ ಹಗಲು ಮಾತ್ರ, ಕೆಲವದರಲ್ಲಿ ರಾತ್ರಿ ಮಾತ್ರ ವಹಿವಾಟು ಇರುವುದರಿಂದಲೂ ಜನರಿಗೆ ತೊಂದರೆಯಾಗುತ್ತಿದೆ. ಸಾಮಾನ್ಯವಾಗಿ ಅಂಗಡಿಗಳು ಕೆಲಸ ನಿರ್ವಹಿಸುವ ವೇಳೆಯಷ್ಟು ಹೊತ್ತು ಯಾವುದಾದರೊಂದು ಸ್ಥಳದಲ್ಲಿ ಗ್ರಾಹಕರಿಗೆ ಸೀಮೆಯೆಣ್ಣೆ ಸಿಗುವಂತಾಗಲಿ ಎಂಬ ಸಲಹೆಯೂ ಕಾರ್ಯಗತವಾಗಿಲ್ಲ.

ಒಟ್ಟಿನಲ್ಲಿ ಗ್ರಾಹಕರು "ಅತೋ ಭ್ರಷ್ಟ ತತೋ ಭ್ರಷ್ಟ" ಎಂಬಂತಾಗಿದ್ದಾರೆ

ಹಬ್ಬದ ಕೊಬರಿ ಎಣ್ಣೆ ಕೊಪ್ಪಕ್ಕೆ ಬರಲಿಲ್ಲ

ಹಬ್ಬಗಳ ಸಾಲಿಗಾಗಿ ಪಡಿತರ ವ್ಯವಸ್ಥೆ ಮೂಲಕ ಕಾರ್ಡುದಾರರಿಗೆ ತಲಾ ೧ ಕಿಲೊದಂತೆ ಹಂಚಲು ಸರ್ಕಾರ ಬಿಡುಗಡೆ ಮಾಡಿರುವ ಕೊಬರಿ ಎಣ್ಣೆ ಕೊಪ್ಪಕ್ಕೆ ಬರಲೇ ಇಲ್ಲ.

ಮೇಲ್ಪಾಲಿನಲ್ಲಿ ಜನ ಸಂಪರ್ಕ ಸಭೆ

ಮೇಲ್ಪಾಲು: ಇಲ್ಲಿ ಸೆ. ೧೨ರಂದು ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಜನಸಂಪರ್ಕ ಸಭೆ ನಡೆಯಿತು.

ಮೂವರಿಗೆ ವೃದ್ಧಾಪ್ಯ ವೇತನ, ೧೧ ಜನರಿಗೆ ಮನೆ ಮಂಜೂರ್ಮಾಡಲಾಯಿತು. ೭೭ ಜನ ದರಖಾಸ್ತುದಾರರ ಪೈಕಿ ೪೧ ಜನರಿಗೆ ದರಖಾಸ್ತು ನಡವಳಿಕೆ ನಡೆದಿದ್ದು ಸಾಗುವಳಿ ಚೀಟಿ ನೀಡುವ ಭರವಸೆ ನೀಡಲಾಯಿತು. ಜಿಲ್ಲೆಯಲ್ಲಿ ಲಭ್ಯವಿರುವ ೩೪ ಸಾವಿರ ಎಕರೆ ಭೂಮಿಯನ್ನು ಈ ಡಿಸೆಂಬರ್ ಅಂತ್ಯದೊಳಗೆ ಹಂಚುವುದಾಗಿ ಜಿಲ್ಲಾಧಿಕಾರಿಗಳು ಹೇಳಿದರು.

ಶೃಂಗೇರಿಯ ಪಾಲಿಗೆ 'ಕೈಗೆ ಬಂದ ತುತ್ತು ಬಾಯಿಗಿಲ್ಲ': ಮಂಜೂರಾಗಿದ್ದ ಐಟಿಐ ಬೇರೆಡೆಗೆ ಎತ್ತಂಗಡಿ?

ಚಿಕ್ಕಮಗಳೂರು: ಈ ಹಿಂದೆ ಶೃಂಗೇರಿಗೆ ಮಂಜೂರಾಗಿದೆಯೆಂದು ಹೇಳಲಾಗಿದ್ದ ಕೈಗಾರಿಕಾ ತರಬೇತಿ ಸಂಸ್ಥೆ(ಐ.ಟಿ.ಐ.)ಯ ಮಂಜೂರಾತಿ ಈಗ ಬೇರೆ ಜಿಲ್ಲೆಗೆ ಹೋಗಿರುವುದಾಗಿ ವರದಿಯಾಗಿದೆ.

ಇದೇ ರೀತಿ ಬೀರೂರಿನ ಐ.ಟಿ.ಐ. ಮತ್ತು ಚಿಕ್ಕಮಗಳೂರಿನ ಮಹಿಳಾ ಐ.ಟಿ.ಐ.ಗಳ ಮಂಜೂರಾತಿಗಳೂ ಈಗ ಬೇರೆ ಜಿಲ್ಲೆಗಳಿಗೆ ವರ್ಗವಾಗಿರುವುದಾಗಿ ವರದಿಗಳು ತಿಳಿಸಿದ್ದು, ಇದಕ್ಕೆ ನಮ್ಮ ಜಿಲ್ಲೆಯ ಮಂತ್ರಿ-ಶಾಸಕರುಗಳು ಇವುಗಳನ್ನು ಕೂಡಲೇ ಆರಂಭಿಸುವಂತೆ ಒತ್ತಾಯ ತರದೆ ಉದಾಸೀನ ಮಾಡಿದ್ದೇ ಕಾರಣವೆಂದು ಆರೋಪಿಸಲಾಗಿದೆ.

ನಿರುದ್ಯೋಗ ತಾಂಡವವಾಡುತ್ತಿರುವ ಈ ದಿನಗಳಲ್ಲಿ ಇವುಗಳು ಕೈತಪ್ಪಿರುವುದರಿಂದ, ವೃತ್ತಿಪರ ಶಿಕ್ಷಣ ಪಡೆದು ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತಾಗಲು ಜಿಲ್ಲೆಯ ಬಡ ಮಕ್ಕಳಿಗೆ ಸಿಕ್ಕಿದ್ದ ಒಂದೇ ಒಂದು ಸುವರ್ಣಾವಕಾಶ ತಪ್ಪಿ ಹೋದಂತಾಗಿದೆ.

ವರದಕ್ಷಿಣೆ ಸಾವು?

ಕೊಪ್ಪ: ಈ ತಾಲ್ಲೂಕಿನ [illegible] ಹತ್ತಿರದ ಕೊಡಿಗೆಬೈಲಿನಲ್ಲಿ ರಾಘವೇಂದ್ರ ಎಂಬವರ ಹೆಂಡತಿ ಸುಶೀಲಾಬಾಯಿ ಸೆ. ೬ರಂದು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ವರದಿಯಾಗಿದೆ. [illegible] ಇವರ ಮದುವೆ ನಡೆದಿತ್ತೆನ್ನಲಾಗಿದ್ದು, ಇದು ವರದಕ್ಷಿಣೆ ಸಂಬಂಧದ ಪ್ರಕರಣವೆಂದು ಆರೋಪಿಸಲಾಗಿದೆ. ಕೊಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ಪಂಚನಾಮೆ ನಡೆಸಿ ತನಿಖೆ ನಡೆಸುತ್ತಿದ್ದು, ಇದು ವರದಕ್ಷಿಣೆ ಪ್ರಕರಣವೇ ಹೌದಾದಲ್ಲಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅವಕಾಶ ಕೊಡಬಾರದೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. [illegible] ಬಗ್ಗೆ ಹೆಚ್ಚಿನ ವಿವರ ತಿಳಿದು ಬಂದಿಲ್ಲ.

ನ. ರಾ. ಪುರ ನ್ಯಾಯಾಲಯದ ಸ್ಥಾನಮಾನ ಕಾಲದ ಪ್ರಶ್ನೆ;
ಕೊಪ್ಪಕ್ಕೆ ಕೋರ್ಟ್ ನಿರಾಕರಿಸಲಾಗದು

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಸ್. ಬಿ. ತಂಬದ್‌ರವರು, ಕೊಪ್ಪದಲ್ಲಿ ಪ್ರಥಮ ದರ್ಜೆ ನ್ಯಾಯಾಲಯಕ್ಕಾಗಿ ಸಿದ್ಧಪಡಿಸಿರುವ ಕಟ್ಟಡವನ್ನೂ, ನ್ಯಾಯಾಧೀಶರ ವಸತಿಗಾಗಿ ಒದಗಿಸಲಿರುವ ಕಟ್ಟಡವನ್ನೂ ಪರಿಶೀಲಿಸಿದ್ದಾರೆ. ಅವರ ವರದಿಯನ್ನು ಪರಿಶೀಲಿಸಿ ರಾಜ್ಯದ ಶ್ರೇಷ್ಠ ನ್ಯಾಯಾಲಯ ಮಾಡುವ ಶಿಫಾರ್ಸಿನ ಆಧಾರದ ಮೇಲೆ ರಾಜ್ಯ ಸರ್ಕಾರ ಮುಂದಿನ ಕ್ರಮ ನಿರ್ಧರಿಸುತ್ತದೆ.

ಶ್ರೀ ತಂಬದ್‌ರವರು ಪರಿಶೀಲನೆ ಮಾಡಿ ವರದಿ ನೀಡಬೇಕಾಗಿದ್ದ ಮುಖ್ಯವಾದ ಅಂಶಗಳೆಂದರೆ: ಒಂದು— ಕೊಪ್ಪಕ್ಕೆ ಒಂದು ನ್ಯಾಯಾಲಯದ ಅವಶ್ಯಕತೆ ಇದೆಯೆ–ಅದಕ್ಕೆ ಸಬಲ ಆಧಾರಗಳೇನು? ಎಂಬುದು. ಈ ಬಗ್ಗೆ ಅವರಿಗೆ ಯಾವುದೇ ಅನುಮಾನ ಉಳಿದಿಲ್ಲ. ಏಕೆಂದರೆ, ಮುಖ್ಯವಾಗಿ ನಿರೀಕ್ಷಿತ ಕೆಲಸದ ಪ್ರಮಾಣದ ದೃಷ್ಟಿಯಿಂದ ಹಾಗೂ ಸೂಕ್ತ ಕಟ್ಟಡದ ಅಲಭ್ಯತೆಯ ಕಾರಣದಿಂದ ಸದ್ಯಕ್ಕೆ ಶೃಂಗೇರಿಯಲ್ಲೊಂದು ಕೋರ್ಟಿನ ಸ್ಥಾಪನೆ ಕಾರ್ಯಸಾಧ್ಯವಲ್ಲವೆಂಬ ಅಭಿಪ್ರಾಯವಿದ್ದು, ಆ ತಾಲ್ಲೂಕಿನ ಕೆರೆಕಟ್ಟೆ, ಮಾವಿನಕಾಡು ಮುಂತಾದ ಪ್ರದೇಶಗಳ ಹಾಗೂ ಕೊಪ್ಪ ತಾಲ್ಲೂಕಿನ ಬಸರಿಕಟ್ಟೆ, ಮೇಗೂರು, ಮೆಣಸಿನಹಾಡ್ಯಗಳಂತಹ ವಿಶಾಲ ಪ್ರದೇಶಗಳ ನೂರಾರು ಹಳ್ಳಿಗಳ ಜನ ಕೋರ್ಟಿಗಾಗಿ ನ.ರಾ.ಪುರಕ್ಕೆ ಹೋಗಬೇಕೆಂದರೆ ಸುಮಾರು ೮೦ ಕಿ.ಮೀ.ವರೆಗೂ ಹೋಗಬೇಕಾಗಿದೆ. ಅದರಲ್ಲೂ ಕೆಲವೊಮ್ಮೆ ೧೦-೧೫ ಕಿ. ಮೀ. ನಡೆದು, ಇರುವ ಒಂದೋ ಎರಡೋ ಬಸ್ಸಿನ 'ಸೌಕರ್ಯ'ದಲ್ಲೇ ಎರಡು–ಮೂರು ಹಂತಗಳಲ್ಲಿ ಪ್ರಯಾಣ ಮಾಡಬೇಕು. ಒಂದು ಸಣ್ಣ 'ಪೆಟಿ ಕೇಸ್' ಇದ್ದರೂ ಅದಕ್ಕಾಗಿ ೨ ದಿನ, ೫೦–೬೦ ರೂ. ದಂಡ ಮಾಡಬೇಕು.

ಇಂಥ ಪರಿಸ್ಥಿತಿಯಲ್ಲಿ ಶೃಂಗೇರಿ, ಕೊಪ್ಪ ತಾ॥ಗಳಿಗೆ ಒಟ್ಟಾಗಿಯಾದರೂ ಕೊಪ್ಪದಲ್ಲೊಂದು ನ್ಯಾಯಾಲಯ ತೆರೆಯಬೇಕಾದ್ದು ಕೇವಲ ಮಾನವೀಯತೆಯ ಕ್ರಮ ಮಾತ್ರ ಎಂಬುದು ಅವರಿಗೆ ಮನವರಿಕೆಯಾಗಿದೆ.

ಎರಡನೇ ಅಂಶ—ಕೊಪ್ಪದಲ್ಲಿ ನ್ಯಾಯಾಲಯಕ್ಕೆ ಸೂಕ್ತವಾದ ಕಟ್ಟಡವಿದೆಯೆ; ನ್ಯಾಯಾಧೀಶರು ಮುಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುವಂತೆ ಸಮರ್ಪಕವಾದ ವಸತಿ ಸೌಕರ್ಯವಿದೆಯೆ; ಬೇರೆಲ್ಲ ಅನುಕೂಲತೆಗಳು ಸಾಕಷ್ಟಿವೆಯೆ? ಎಂಬುದು. ಈ ಅಂಶಗಳ ಬಗ್ಗೆ ಕೂಡ ನ್ಯಾಯಾಧೀಶರಿಗೆ ಸಂಪೂರ್ಣ ತೃಪ್ತಿಯಾಗಿದೆ, ನ್ಯಾಯಾಲಯ ಸ್ಥಾಪನೆಗೆ ಆರಂಭದಲ್ಲಿ ಇಷ್ಟು ಸೌಕರ್ಯ ಯಥೇಚ್ಛ ಅನ್ನಿಸಿದೆ.

ಮೂರನೆಯ ಅಂಶ— ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪನೆಯಾಗಿ, ಕೊಪ್ಪ, ಶೃಂಗೇರಿ ತಾ॥ಗಳ ಪ್ರಕರಣಗಳೆಲ್ಲ ಇಲ್ಲಿಗೆ ಬರುವಂತಾದರೆ, ನ.ರಾ.ಪುರದಲ್ಲಿ ಒಂದು ನ್ಯಾಯಾಲಯಕ್ಕಾಗುವಷ್ಟು ಕೆಲಸ ಉಳಿಯುತ್ತದೆಯೆ? ಎಂಬುದು. ಏಕೆಂದರೆ, ನ್ಯಾಯಾಧೀಶರಿಗೆ ದಿನಕ್ಕೆ ಒಂದೋ ಎರಡೋ ಗಂಟೆ ಮಾತ್ರ ಕೆಲಸ ಇರುವುದಾದರೆ ಅಂಥ ಕಡೆಗೆ ಒಂದು ನ್ಯಾಯಾಲಯ ಕೊಡುವುದು ಸರ್ಕಾರಕ್ಕೆ ಕಷ್ಟ. ಈ ಬಗ್ಗೆ ಅವರಿನ್ನೂ ಅಂಕಿ-ಅಂಶ ತರಿಸಿ ಪರಿಶೀಲಿಸಬೇಕಾಗಿದೆ.

ಈ ಮೂರನೇ ಅಂಶವೇ ಈಗ ಬಹಳ ಮುಖ್ಯವಾಗಿರುವುದು.

ಏಕೆಂದರೆ ಈ ಎರಡು ತಾ॥ಗಳ ಕೆಲಸ ಕಳೆದರೆ ಅಲ್ಲಿ ಕಾಲು ಭಾಗ ಕೆಲಸ ಕೂಡ ಉಳಿಯುವುದು ಕಷ್ಟ. ಹಾಗಾದರೆ ಅಲ್ಲಿಂದ ನ್ಯಾಯಾಲಯ ತೆಗೆಯಬೇಕೆ? ಅಥವಾ ಈ ಎರಡು ತಾ॥ಗಳ ಒಂದು ಲಕ್ಷಕ್ಕೂ ಮಿಕ್ಕಿದ ಜನ ಇನ್ನೂ ಅನಿರ್ದಿಷ್ಟ ಕಾಲದವರೆಗೆ ನ್ಯಾಯಾಲಯದ ಕೊಡುಗೆಯಿಂದ ವಂಚಿತರಾಗಬೇಕೆ? ಇದು ಈಗ ಇತ್ಯರ್ಥವಾಗಬೇಕಾಗಿದೆ.

ಪ್ರತಿ ತಾಲ್ಲೂಕಿಗೊಂದು ನ್ಯಾಯಾಲಯ ಸ್ಥಾಪಿಸಬೇಕೆಂದು ಸರ್ಕಾರದ ತೀರ್ಮಾನವೇ ಇದೆ. ಅದನ್ನು ಬಿಟ್ಟೂ ಸಹ, ಯಾವ ದೃಷ್ಟಿಯಿಂದ ನೋಡಿದರೂ ಸುಮಾರು ೮೦ ಸಾವಿರ ಜನಸಂಖ್ಯೆಯುಳ್ಳ ಕೊಪ್ಪ ತಾಲ್ಲೂಕಿಗೆ ಒಂದು ನ್ಯಾಯಾಲಯ ಸ್ಥಾಪನೆ ಆಗಲೇಬೇಕು (ಇದರ ಜೊತೆಗೆ ಶೃಂಗೇರಿ ತಾಲ್ಲೂಕಿನ ಸುಮಾರು ೩೦ ಸಾವಿರ ಜನಸಂಖ್ಯೆಯೂ ಸೇರುತ್ತದೆ.)

ಆದರೆ, ನ.ರಾ.ಪುರದ ನ್ಯಾಯಾಲಯಕ್ಕೆ ನೂರು ವರ್ಷದ ಇತಿಹಾಸವಿದೆ. ಈಗಾಗಲೇ ಸ್ವಂತ ಕಟ್ಟಡವಿದೆ; ೯ ಲಕ್ಷ ರೂ. ವೆಚ್ಚದಲ್ಲಿ ಇನ್ನೂ ಸುಸಜ್ಜಿತವಾದ ಇನ್ನೊಂದು ಕಟ್ಟಡ ತಯಾರಾಗುತ್ತಿದೆ. ಇಷ್ಟೆಲ್ಲ ಇರುವಾಗ ಅಲ್ಲಿಂದ ಕೋರ್ಟನ್ನು ತೆಗೆಯಲು ಸಾಧ್ಯವೆ? ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ಹಾಗಾದರೆ, ನೂರು ವರ್ಷಗಳ ಅಲ್ಲಿನ ನ್ಯಾಯಾಲಯ ರದ್ದು ಮಾಡಲೂ ಆಗುವುದಿಲ್ಲ, ಅಲ್ಲಿ ಒಂದು ಕೋರ್ಟಿಗಾಗುವಷ್ಟು ಕೆಲಸ ಉಳಿಯುವಂತಾಗದೆ ಕೊಪ್ಪಕ್ಕೆ ನ್ಯಾಯಾಲಯ ಕೊಡಲೂ ಆಗುವುದಿಲ್ಲ ಎನ್ನುವುದಾದರೆ ಕೊಪ್ಪಕ್ಕೆ ಎಂದಾದರೂ ಒಂದು ನ್ಯಾಯಾಲಯ ಬರುವುದು ಸಾಧ್ಯವಿದೆಯೆ? ಏಕೆಂದರೆ, ಬೇರೆಯವರಿಗೆ ನೀರುಣಿಸಲು ತನ್ನ ಸರ್ವಸ್ವವನ್ನೂ ಮುಳುಗಡೆ ಮಾಡಿಕೊಂಡ ನತದೃಷ್ಟ ನ.ರಾ.ಪುರ ತಾಲ್ಲೂಕಿಗೆ ಈಗ ಉಳಿದಿರುವುದು ಎರಡು ಹೋಬಳಿಗಳ ಅಷ್ಟಿಷ್ಟು ಭಾಗ ಮಾತ್ರ. ಅಷ್ಟಕ್ಕೇ ಒಂದು ನ್ಯಾಯಾಲಯ ಬೇಕಾಗುವುದು ಸದ್ಯದಲ್ಲೆಂದಾದರೂ ಸಾಧ್ಯವೆ? ಹಾಗಿದ್ದರೆ ಇನ್ನೂ ಎಷ್ಟು ಕಾಲ ಈ ಮೂರೂ ತಾ॥ಗಳಿಗೆ ನ.ರಾ.ಪುರ ಒಂದೇ ನ್ಯಾಯಾಲಯವಾಗಿರಬೇಕು?

ಹಾಗಿಲ್ಲದೆ, ಎಂದಾದರೊಂದು ದಿನ ಕೊಪ್ಪಕ್ಕೆ ಅದರದೇ ಅಗತ್ಯದ ಆಧಾರದ ಮೇಲೆ ಒಂದು ನ್ಯಾಯಾಲಯ ಕೊಡಲೇಬೇಕೆಂಬುದನ್ನು ಒಪ್ಪುವುದಾದರೆ, ಆ ಸಮಯ ೧೫ ವರ್ಷದ ಹಿಂದೆಯೇ ಮೀರಿ ಹೋಗಿದೆ. ಆದ್ದರಿಂದ ಈಗಲಾದರೂ ಆ ಕೆಲಸವನ್ನು ತುರ್ತಾಗಿ ಮಾಡಲೇ ಬೇಕು.

ಇನ್ನು ನ. ರಾ. ಪುರದ ನ್ಯಾಯಾಲಯದ ಪ್ರಶ್ನೆಗೆ ಒಂದೇ ಒಂದು ಸಮಾಧಾನ ಕೊಡಬಹುದು — ಇಷ್ಟೊಂದು ವಿಶಾಲ ಜನತೆಗೆ ಅತ್ಯಗತ್ಯವಾದ ಸೌಲಭ್ಯ ಒದಗಿಸುವುದರ ಮುಂದೆ ಅದೇನಿದ್ದರೂ ಮುಖ್ಯವಾಗಿ ಭಾವನಾತ್ಮಕವಾದ (ಸೆಂಟಿಮೆಂಟ್ಸ್) ಪ್ರಶ್ನೆ. ಅದನ್ನು ಕಾಲ ಮಾತ್ರ ಇತ್ಯರ್ಥಗೊಳಿಸಬಲ್ಲದು. ಆದ್ದರಿಂದ ಸದ್ಯಕ್ಕಂತೂ ಅದು ಎಷ್ಟು ಉಳಿಯುತ್ತದೋ ಅಷ್ಟಕ್ಕೆ ಮಾತ್ರ ಉಳಿಸಬೇಕಾಗುತ್ತದೆ, ಹೊರತು ಅದಕ್ಕೋಸ್ಕರ ಇಷ್ಟು ಜನರಿಗೆ ಈ ಸೌಲಭ್ಯ ನಿರಾಕರಿಸಲಾಗದು.

—ಸಂಪಾದಕ.

ಭಾರತ ಬಯಸುವ ಆಡಳಿತ ಪದ್ಧತಿ—

"ದ್ವಿಪಕ್ಷೀಯ ಪ್ರಜಾಪ್ರಭುತ್ವ"

ಸ್ವತಂತ್ರ ಭಾರತ ಇಂದು ನೂರೆಂಟು ಜಟಿಲ ಸಮಸ್ಯೆಗಳ ಆಗರವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತಕ್ಕೆ ಪ್ರಜಾಪ್ರಭುತ್ವನಿರುಪಯುಕ್ತ ಎನ್ನುವಂತಾಗಿದೆ. ಮತದಾರ ಮೂಕ ಪ್ರೇಕ್ಷಕನಾಗಿದ್ದಾನೆ. ನಮ್ಮ ದೇಶ ಅಧಿಕಾರ ಲಾಲಸೆಯ ರಣಹದ್ದುಗಳ ಬಿಗಿಮುಷ್ಟಿಗೆ ಸಿಲುಕಿದೆ.

ಮೀಗ ಜಗದೀಶ್.

ಸಂವಿಧಾನದನ್ವಯ ಯಾರು ಯಾವಾಗ ಬೇಕಾದರೂ ಪ್ರಾಂತೀಯ ಅಥವಾ ರಾಷ್ಟ್ರೀಯ ಪಕ್ಷಗಳನ್ನು ಕಟ್ಟಬಹುದಾಗಿದೆ. ಇದರ ಪರಿಣಾಮವಾಗಿ ೩೫ ವರ್ಷ ಕಾಂಗ್ರೆಸ್ ನಿರಾತಂಕವಾಗಿ ಆಡಳಿತ ನಡೆಸಿತು. ಹಾಗೆಯೇ ೩ ವರ್ಷಗಳು ಮಾತ್ರ ಆಳಿ ಅವಧಿ ಪೂರ್ಣಗೊಳಿಸದೆಯೇ ಜನತಾಪಕ್ಷ ಸೋಲನ್ನಪ್ಪಿತು.

ಒಂದುಗೂಡುವ, ಒಕ್ಕೂಟ ರಚಿಸುವ ವಿರೋಧ ಪಕ್ಷಗಳ ಕೂಗು ಕೇಳಿಬರುತ್ತಿದೆ. ಅಧಿಕಾರಕ್ಕೆ ಬರುವವರೆಗೆ ಮಾತ್ರ ಈ ಕೂಗು. ಅನಂತರ ಇದೇ ಒಕ್ಕೂಟ, ಒಂದು ಮನೆಗೆ ಹತ್ತು ಮಂದಿ ಯಜಮಾನಿಕೆ ಮಾಡುವಂತೆ ಮಾಡಿ, ಕೊನೆಗೆ ಪಕ್ಷವನ್ನು ಒಡೆದು ಬಹುಮತ ಕಳೆದುಕೊಳ್ಳುವರು. ಚುನಾವಣೆಗಾಗಿ ಖರ್ಚು ಮಾಡಿದ ಹಣ, ಸಮಯ ಎಲ್ಲವೂ ನಿರ್ನಾಮವಾಗುವುದು.

ನಮ್ಮ ಭಾರತ ದಕ್ಷತೆಯಿಂದ ಆಳಬಲ್ಲ ಒಂದು ಆಡಳಿತ ಪಕ್ಷವನ್ನು ಹಾಗೂ ಸಮಗ್ರ ಭಾರತವನ್ನು ಸುರಕ್ಷಿತ ಮಾರ್ಗದಲ್ಲಿ ಕೊಂಡು ಹೋಗಬಲ್ಲ ಒಂದೇ ಒಂದು ಪ್ರಬಲ ವಿರೋಧ ಪಕ್ಷವನ್ನು ಬಯಸುತ್ತಿದೆ. ಇಂದು ರಾಜಕಾರಣಿಗಳೆಂದು ಹೇಳಿಕೊಂಡು ಕಪಿಚೇಷ್ಟೆಗೆ ತೊಡಗಿರುವ ಈ ಮಂದಿ ಮೂಲೆಗೆ ಕೂರದೆ ನಮ್ಮ ದೇಶಕ್ಕೆ ಮಾರ್ಗದರ್ಶನವೇ ದೊರೆಯಲಾರದು.

ಅಂತರ್ರಾಷ್ಟ್ರೀಯವಾಗಿ ನಮ್ಮದು 'ಯಶಸ್ವೀ ಪ್ರಜಾ ಪ್ರಭುತ್ವ' ಎನ್ನಿಸಿಕೊಂಡಿದ್ದರೂ ರಾಷ್ಟ್ರವು ಇಂದು ಕೋಮು ಗಲಭೆ ಧರ್ಮಾಂಧತೆ, ಅಧಿಕಾರಕ್ಕಾಗಿ ಕಿತ್ತಾಟ, ವಂಶವಾಹಿ ಆಡಳಿತದಂತಹ ರಾಜಕೀಯ ಜಟಿಲ ಸಮಸ್ಯೆಗಳನ್ನು ಅನುಭವಿಸುತ್ತಿದೆ.

ಜನಸಂಖ್ಯಾ ಸಮಸ್ಯೆಯಂತಹ ಭೀಕರ ಸಮಸ್ಯೆ ಗುಣಪಡಿಸಲಾಗದ ರೋಗವಾಗಿದೆ. ಆರ್ಥಿಕ ಅಸಮಾನತೆಯು ತೀವ್ರವಾಗುತ್ತಿದೆ. ನಿರುದ್ಯೋಗ ದಿನೇ ದಿನೇ ಹೆಚ್ಚುತ್ತಿದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿ ಚುನಾಯಿತ ಲೋಕಸಭೆ, ರಾಜ್ಯ ವಿಂಗಡಿತ ಆಡಳಿತವಿಲ್ಲದ ದ್ವಿಪಕ್ಷೀಯ ಪ್ರಜಾ ಪ್ರಭುತ್ವ ಅಪೇಕ್ಷಣೀಯ.

ಚಂದಾ ಹಣ ಕಳಿಸಿ
ಸ ಹ ಕ ರಿ ಸಿ
ಚಂದಾದರ: ವಾರ್ಷಿಕ ಚಂದಾ ೨೦ರೂ.

ಹಾಗಲ ಕಾಯಿ: ತಿನ್ನಲು ಕಹಿ, ಪರಿಣಾಮ ಸಿಹಿ

ಭಾರತದ ಉದ್ದಗಲಕ್ಕೂ ಬೆಳೆಯುವ, ತರಕಾರಿಯಾಗಿ ಬಳಸುವ ಹಾಗಲಕಾಯಿಯ ಕಹಿಯಾದ ರುಚಿಯನ್ನು ಅರಿಯದವರಿಲ್ಲ. ಆದರಿಂದ ತಯಾರಾದ ವ್ಯಂಜನಗಳ ಸವಿಯನ್ನು ಅನುಭವಿಸದವರಿಲ್ಲ. ಆದರೆ ಇದರ ಔಷಧೀಯ ಮಹತ್ವವನ್ನು ಬಲ್ಲವರೇ ಬಲ್ಲರು. ಮುಖ್ಯವಾಗಿ ಇದರ ಕಾಯಿ ಬಲಿತ ಮೇಲೆ ತರಕಾರಿಯಾಗಿ ಬಳಸಲ್ಪಡುವುದಾದರೂ ಎಲೆಗಳೂ ಸಹ ಔಷಧ ಮಹತ್ವವನ್ನು ಹೊಂದಿವೆ.

ಆಯುರ್ವೇದ ಹಾಗೂ ಯುನಾನಿ ಔಷಧ ಯೋಗಗಳಲ್ಲೆಲ್ಲಾ ಹಾಗಲಕಾಯಿಯು ಉಪಯುಕ್ತವಾಗಿದೆ. ಅಂತೆಯೇ ಸಮೂಲವಾಗಿ ಸ್ವರಸ ತೆಗೆದು ಅನೇಕ ಉಪದ್ರವಗಳಲ್ಲಿ ಔಷಧಿಯಾಗಿಯೂ ಸಹ ಪ್ರಯೋಗಿಸಲ್ಪಡುತ್ತದೆ.

ಹಾಗಲವು ಅರುಚಿ, ರಕ್ತಪಿತ್ತ, ಕಫ

(೩ನೇ ಪುಟಕ್ಕೆ)

ಬಸ್ ಮಾರ್ಗ ರಾಷ್ಟ್ರೀಕರಣದ ಶಾಪ

...ಂದು ಕ್ಷುಲ್ಲಕ ಕಾನೂನಿನ ತೊಡಕು : ಮಲೆನಾಡ ಪ್ರಯಾಣಿಕರಿಗೆ ಜೀವಾವಧಿ (?) ಶಿಕ್ಷೆ

ಕಾನೂನು ಜನರ ಹಕ್ಕಿಗೆ, ಸೌಕರ್ಯಕ್ಕೆ ಅಡ್ಡ ಬಂದರೆ ಆ ಕಾನೂನನ್ನೇ ಬದಲಿಸಬೇಕು ಎಂಬುದಾಗಿ ಗಾಂಧೀಜಿ ಹೇಳುತ್ತಿದ್ದರು. ಹಾಗೆ, ಕ್ಷುಲ್ಲಕವಾದರೂ ಅಸಂಖ್ಯ ಜನರಿಗೆ ಅಪಾರ ತೊಂದರೆ ಕೊಡುತ್ತಿರುವ ಒಂದು ಕಾನೂನಿನ ಅಂಶವನ್ನು ತಿದ್ದುಪಡಿಯಲ್ಲದಿದ್ದರೆ ಕನಿಷ್ಠ ಸರಳಗೊಳಿಸಬೇಕಾದ ಪ್ರಮೇಯವೊಂದು ಇಲ್ಲಿದೆ.

...ಕ್ಷುಲ್ಲಕವಾದ ಒಂದು ಕಾನೂನಿನ ಅಡ...ಣೆ ('ತಾಂತ್ರಿಕ ಕಾರಣ') ಬಂದು ಶೃಂ...ೇರಿ, ಕೊಪ್ಪ, ನ.ರಾ.ಪುರ ತಾಲ್ಲೂಕುಗಳ ...ಾಗೂ ಕಳಸ ಹೋಬಳಿಯ ಜನ ಜಿಲ್ಲಾ ...ೇಂದ್ರಕ್ಕೆ ಸರಿಯಾದ ಸಾರಿಗೆ ಸಂಪರ್ಕ ...ೊಂದಲು ದೊಡ್ಡ ಅಡ್ಡಿಯುಂಟಾಗಿದೆ.

...ಜಿಲ್ಲೆಯ ಮಲೆನಾಡ ಜನರಿಗೆ ಅತ್ಯಂತ ...ನುಕೂಲಕರವಾಗಿದ್ದ ಚಿಕ್ಕಮಗಳೂರು–...ೋಗ ಬಸ್ ಮಾರ್ಗಕ್ಕೆ ಜಿಲ್ಲಾ ರಸ್ತೆ ಸಾ...ಗೆ ಪ್ರಾಧಿಕಾರ ಪರವಾನಗಿ ನಿರಾಕರಿಸಿ...ಾಗ ಈ ಅಂಶ ಬೆಳಕಿಗೆ ಬಂತು. ಸಾಗರದ ...ಾಯತ್ರಿ ಮೋಟಾರ್ ಸಂಸ್ಥೆ ಈ ಮಾರ್ಗ...ಕ್ಕೆ ಪರ್ಮಿಟ್ ಕೇಳಿತ್ತು.

...ಜಿಲ್ಲೆಯ ಕಡೂರು, ತರೀಕೆರೆ, ಚಿಕ್ಕ...ಮಗಳೂರು, ಮೂಡಿಗೆರೆ ತಾಲ್ಲೂಕಿನ ಹೆಚ್ಚಿ...ನ ಬಸ್ ರಸ್ತೆಗಳು ಬಹಳ ಹಿಂದೆಯೇ ರಾ...ಷ್ಟ್ರೀಕರಣವಾಗಿವೆ. ಕೊಪ್ಪ, ನ.ರಾ.ಪುರ, ...ಶೃಂಗೇರಿ ತಾಲ್ಲೂಕುಗಳಲ್ಲಿ ರಸ್ತೆಗಳ ರಾಷ್ಟ್ರೀ...ಕರಣವಾಗದೇ ಇರುವುದರಿಂದ ಖಾಸಗಿ ...ಬಸ್ಸುಗಳೇ ಓಡಾಡುತ್ತಿವೆ. ಈ ಕಡೆಗಳಿಂದ ...ಚಿಕ್ಕಮಗಳೂರಿಗೆ ಬರುತ್ತಿರುವ ಖಾಸಗಿ ...ಬಸ್ಸುಗಳು ಆಲ್ದೂರಿನಿಂದ ತೋರಣಮಾವು ...ಮೂಲಕ ಆಣೂರಿನ ಮೇಲೆ ಸುತ್ತು ಬಳಸಿ ...ಚಿಕ್ಕಮಗಳೂರಿಗೆ ಬರುತ್ತವೆ.

...ರಾಷ್ಟ್ರೀಕೃತವಾಗಿರುವ ಚಿಕ್ಕಮಗಳೂ...ರು–ಮೂಡಿಗೆರೆ ರಸ್ತೆ, ವಸ್ತಾರೆ ಮೂಲಕ ...ನೇರವಾಗಿ ತೋರಣಮಾವು, ಆಲ್ದೂರು ...ಮೂಲಕ ಹಾದು ಹೋಗುತ್ತದೆ. ಇಲ್ಲಿ ತೋ...ರಣಮಾವು, ಆಲ್ದೂರು ನಡುವಿನ ಸುಮಾರು ...ಕಿ.ಮೀ. ಗಳಷ್ಟು ರಸ್ತೆ ರಾಷ್ಟ್ರೀಕೃತವಾ...ಗಿದ್ದರೂ ಆಣೂರು ಮೂಲಕ ಹೋಗುವ ...ಖಾಸಗಿ ಬಸ್ಸುಗಳೂ ಇದೇ ಹಾದಿಯ ಮೂ...ಲಕ ಹೋಗಬೇಕಾಗಿದೆ.

...ಕಾನೂನಿನ ಪ್ರಕಾರ, ರಾಷ್ಟ್ರೀಕರಣವಾ...ದ ರಸ್ತೆಯ ಮೇಲೆ ಖಾಸಗಿ ಬಸ್ಸುಗಳು ಓ...ಡಾಡುವಂತಿಲ್ಲ. ಆದರೆ ಬೇರೆಲ್ಲೂ ದಾರಿಯೇ ...ಇಲ್ಲದಿದ್ದರೆ, ರಸ್ತೆಯ ರಾಷ್ಟ್ರೀಕರಣಕ್ಕಿಂತ ...ಮುಂಚೆಯೇ ಪರ್ಮಿಟ್ ಪಡೆದ ಬಸ್ಸುಗಳು ...ಮಾತ್ರ ಓಡಾಡಬಹುದು. ಹೀಗಾಗಿ, ಮಲೆ...ನಾಡ ಈ ಭಾಗದ ಜನ ಜಿಲ್ಲಾ ಕೇಂದ್ರಕ್ಕೆ ...ಸಂಚರಿಸಲು ಹೊಸ ಬಸ್ ಪರ್ಮಿಟ್‌ಗಳು ...ದೊರೆಯದಂತಾಗಿದೆ.

...ಈ ಪ್ರದೇಶದಲ್ಲಿ ಕೆಲವು ವರ್ಷಗಳಿಂದ ...ಹೊಸ ಬಸ್ ಪರ್ಮಿಟ್‌ಗಳು ಆಗಲೇ ಇಲ್ಲ. ...ಇದರಿಂದ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿ...ದೆಯಲ್ಲದೆ, ಮಳೆಗಾಲವನ್ನು ಬಿಟ್ಟರೆ ಉಳಿ...ದಂತೆ, ಬಸ್ಸುಗಳಲ್ಲಿ ಪ್ರಯಾಣ ಮಾಡು...ವುದೇ ದುಸ್ತರ ಎನ್ನುವ ಪರಿಸ್ಥಿತಿ ಮೂಡಿವೆ. ...ಮುಖ್ಯವಾಗಿ ಮಹಿಳೆಯರು ಮತ್ತು ವೃದ್ಧರ ...ಪಾಡು ಹೇಳ ತೀರದು.

...ಈ ಪ್ರದೇಶಗಳಲ್ಲಿ ಸರ್ಕಾರಿ ಬಸ್ಸುಗಳ ...ಸಂಖ್ಯೆ ಹೆಚ್ಚಿಸಬಹುದಾದರೂ, ಖಾಸಗಿ ...ಬಸ್ಸುಗಳವರು ಸರ್ಕಾರಿ ಬಸ್ಸುಗಳಿಗೆ ಅವ...ಕಾಶ ನೀಡುತ್ತಿಲ್ಲ. ಬಸ್ ಮಾಲೀಕರ ಹಿತಾಸಕ್ತಿಗಳನ್ನು ಮಾತ್ರ ಎತ್ತಿ ಹಿಡಿಯುವ ನಮ್ಮ ಮೋಟಾರ್ ವಾಹನ ಕಾಯಿದೆಗಳು ಮತ್ತು ಸಾರಿಗೆ ಪ್ರಾಧಿಕಾರಗಳು ಸಾವಿರಾರು ಪ್ರಯಾಣಿಕರ ಗೋಳನ್ನಾಗಲೀ, ಅನಾನುಕೂಲವನ್ನಾಗಲೀ ಕುರಿತು ಚಿಂತಿಸುವುದಿಲ್ಲ. ಸರ್ಕಾರಿ ಬಸ್ಸು ಸಂಸ್ಥೆಯವರಿಗೂ ಕೂಡ ಇಂತಹ ಕಡೆ ಬಸ್ಸುಗಳನ್ನು ಓಡಿಸುವಲ್ಲಿ ಬಹಳ ಉತ್ಸಾಹವೂ ಇಲ್ಲ.

"ಹಾಸನ–ಶೃಂಗೇರಿ" ಬಸ್ಸು ಇದಕ್ಕೊಂದು ಉದಾಹರಣೆ. ಈ ಬಸ್ಸಿಗಾಗಿ ಜನತೆ ಸತತ ಹೋರಾಟ ನಡೆಸದಿದ್ದರೆ ಈ ಬಸ್ಸು ಎಂದೋ ನಿಂತು ಹೋಗುತ್ತಿತ್ತು. ಸಾರಿಗೆ ಸಂಸ್ಥೆಯ ಕಾನೂನು ವಿಭಾಗವೂ ಅಷ್ಟೇ ನಿರುತ್ಸಾಹ ತಾಳಿತ್ತು. ಆದರೆ ಅದೇ ಕಾನೂನು ವಿಭಾಗ ತನಗೆ ಯಾವ ಬಾಧೆಯೂ ಇಲ್ಲದ ಗಾಯತ್ರಿ ಮೋಟಾರ್ ಪರ್ಮಿಟನ್ನು ರದ್ದು ಪಡಿಸಲು ಆಲ್ದೂರು–ತೋರಣಮಾವು ರಸ್ತೆಯ ಬಗ್ಗೆ ಭಾರಿ ಹಕ್ಕು ಚಲಾಯಿಸಿತು!

(ಹಾಸನ–ಶೃಂಗೇರಿ ಬಸ್ ನಿಲ್ಲಿಸಲು ಹೆಣಗಾಡಿದ ಖಾಸಗಿ ಹಿತಾಸಕ್ತಿಯೇ ಇವರಿಂದ ಈ ಕೆಲಸ ಮಾಡಿಸಿದ್ದು ಎಂಬ ಬಗ್ಗೆ ಜನರಿಗೆ ಅನುಮಾನ ಉಳಿದಿಲ್ಲ.)

ವಾಸ್ತವವಾಗಿ ಆಲ್ದೂರು – ತೋರಣಮಾವು ಮಧ್ಯದ ೩ ಕಿ. ಮೀ. ರಸ್ತೆಯಲ್ಲಿ ಖಾಸಗಿ ಬಸ್ಸುಗಳು ಓಡಾಡುವುದರಿಂದ ಸಾರಿಗೆ ಸಂಸ್ಥೆಗೆ ಯಾವ ತೊಂದರೆಯೂ ಆಗುವುದಿಲ್ಲ. ಈ ಪ್ರದೇಶದಲ್ಲಿ ಯಾವ ಹಳ್ಳಿಯೂ ಇಲ್ಲ, ಇದ್ದರೂ ಪ್ರಯಾಣಿಕರು ಚಿಕ್ಕಮಗಳೂರಿಗೆ ಹೋಗಲು ಸರ್ಕಾರಿ ನೇರ ಬಸ್ಸಿನ ಅನುಕೂಲ ಪಡೆದಾರೇ ವಿನಃ ಸುತ್ತಿಬಳಸಿ ಹೋಗುವ ಖಾಸಗಿ ಬಸ್ಸುಗಳನ್ನಲ್ಲ.

ತೋರಣಮಾವು–ಆಲ್ದೂರು ರಸ್ತೆಯಲ್ಲಿ ಖಾಸಗಿ ಬಸ್ಸುಗಳು ಓಡಾಡಬಹುದೇ ಇಲ್ಲವೇ ಎನ್ನುವ ಪ್ರಶ್ನೆ ಇನ್ನೂ ಸರಿಯಾಗಿ ಸ್ಪಷ್ಟವಾಗಿಲ್ಲ. ಗಾಯತ್ರಿ ಮೋಟಾರ್ ಸಂಸ್ಥೆಯ ಮೊಕದ್ದಮೆಯಲ್ಲಿ ಈ ಸಂಸ್ಥೆಗೆ ಚಿಕ್ಕಮಗಳೂರು ಸಾರಿಗೆ ಪ್ರಾಧಿಕಾರವೇ ಅವಕಾಶ ಕೊಟ್ಟಿತ್ತು. ಇಲ್ಲಿ ಜಿಜ್ಞಾಸೆ ಭಾಗವೆಂದರೆ, ಈ ಮಾರ್ಗ ಇಂಟರ್ ಸೆಕ್ಷನ್ (ಛೇದಕ) ಎಂದು ಕರೆಯಲ್ಪಡಬೇಕೇ ಅಥವಾ ಓವರ್ ಲ್ಯಾಪ್ (ಮೇಲು ಹೊದಿಕೆ) ಎಂದು ಕರೆಯಲ್ಪಡಬೇಕೇ ಎಂಬುದು. ಇಂಟರ್ ಸೆಕ್ಷನ್ ಎಂದಾದರೆ ಆ ಪ್ರದೇಶದಲ್ಲಿ ಹೊಸ ಪರ್ಮಿಟ್ ಕೊಡಬಹುದು. ಆದರೆ ಓವರ್ ಲ್ಯಾಪ್ ಎಂದಾದರೆ ಕೊಡುವಂತಿಲ್ಲ.

ಎರಡನೇ ಬಾರಿ ಗಾಯತ್ರಿ ಸಂಸ್ಥೆ ಪರ್ಮಿಟ್ ಕೇಳಿದಾಗ ಈ ಭಾಗ ಇಂಟರ್‌ಸೆಕ್ಷನ್ ಎಂದು ಪುರಾವೆ ಮಾಡಲು ಅರ್ಜಿದಾರರು ವಿಫಲರಾದ್ದರಿಂದ ಪರ್ಮಿಟ್ ಅನ್ನು ನಿರಾಕರಿಸಲಾಯಿತು.

ಕಾನೂನು ಪಂಡಿತರು ಮಾಡುವ ಈ ಕಿರಿಯ ತಪ್ಪುಗಳಿಗೆ ಸಾವಿರಾರು ಪ್ರಯಾಣಿಕರು ಶಿಕ್ಷೆ ಅನುಭವಿಸಬೇಕಾಗಿದೆ. ಮಲೆನಾಡಿನ ಜನ ತಮ್ಮ ಜಿಲ್ಲಾ ಕೇಂದ್ರ ಸೇರಲು ಕೆಟ್ಟ ರಸ್ತೆಯನ್ನು ಬಳಸುವಂತಾದದ್ದೇ ರಾಷ್ಟ್ರೀಕರಣದ ಒಂದು ಶಾಪ. ಅದರಲ್ಲೂ ಹೊಸ ಬಸ್ ಪರ್ಮಿಟ್‌ಗಳನ್ನೇ ನಿರಾಕರಿಸಲಾಗುತ್ತದೆಯೆಂದರೆ ಜನ ಪ್ರಯಾಣಿಸಲು ಎಷ್ಟು ಕಿರುಕುಳ ಪಡಬೇಕಾಗುತ್ತದೆ ಎಂಬುದ. ಊಹಿಸಲೂ ಅಸಾಧ್ಯ.

ಸಾರಿಗೆ ಪ್ರಾಧಿಕಾರಗಳೂ ಕೂಡ ಬಸ್ ಮಾಲೀಕರ ಶಬ್ದಗಳ ಪಾಂಡಿತ್ಯಕ್ಕೆ ಕೊಡುವ ಮಹತ್ವವನ್ನು ಜನರ ಸಂಕಷ್ಟಗಳನ್ನು ಪರಿಹರಿಸುವುದಕ್ಕೆ ಕೊಡುವುದಿಲ್ಲ. ಇಡೀ ಮಲೆನಾಡಿನ ಜನ ಶಿವಮೊಗ್ಗ–ಸಾಗರ ಜೋಗಗಳಿಗೆ ಹೋಗಲು ಅತ್ಯಂತ ಅನುಕೂಲಕರವಾದ ಬಸ್ಸು ತಮಗೆ ಬೇಕೆಂದು ಅಂಗಲಾಚಿ ಬೇಡಿದರೂ ಕೆಲವೇ ಬಸ್ ಮಾಲೀಕರ ಹಿತಾಸಕ್ತಿಯನ್ನು ಪ್ರಾಧಿಕಾರ ಎತ್ತಿ ಹಿಡಿಯುತ್ತದೆ.

ಕೆಲವೊಮ್ಮೆ ಈ ಪ್ರಾಧಿಕಾರಗಳು ಪಕ್ಷಪಾತ ಬುದ್ಧಿಯನ್ನು ತೋರುವುದೂ ಇದೆ. ಶಿವಮೊಗ್ಗದ ಸಾರಿಗೆ ಪ್ರಾಧಿಕಾರ ಒಂದೇ ರಸ್ತೆಯಲ್ಲಿ ಪರ್ಮಿಟ್ ಕೇಳಿದ್ದ ಒಂದು ಬಸ್ ಕಂಪೆನಿಗೆ ಸಮ್ಮತಿ ನಿರಾಕರಿಸಿ ಇನ್ನೊಂದು ಕಂಪೆನಿಗೆ ಸಮ್ಮತಿ ನೀಡಿದ್ದು ಇದಕ್ಕೊಂದು ಉದಾಹರಣೆ.

ಮೊದಲೇ ಅಧ್ಯತೆ ಹೊಂದಲು ಕೆಲವು ಬಸ್ ಕಂಪೆನಿಗಳನವರು ಕೆಲವು ರೂಟ್ ಪರ್ಮಿಟ್‌ಗಳನ್ನು ಈಗಾಗಲೆ ಹೊಂದಿದ್ದಾರೆ ಆದರೆ ಬಸ್ಸುಗಳನ್ನು ಓಡಿಸುತ್ತಿಲ್ಲ. ಈ ಬಗ್ಗೆ ದೂರು ನೀಡಿ ಅದು ರುಜುವಾತಾಗಿದ್ದರೂ ಅಧಿಕಾರಿಗಳು ಇನ್ನೂ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಂಡಿಲ್ಲ. ಆದರೆ ಅದೇ ಅಧಿಕಾರಿಗಳಿಗೆ ಹೊಸ ಪರ್ಮಿಟ್‌ಗಳನ್ನು ನೀಡಲು ಕಾನೂನು ಅಡ್ಡಿ ಪಡಿಸುತ್ತದೆ. ಈ ಅಧಿಕಾರಿಗಳೇ, ಪ್ರಯಾಣಿಕರ ದಟ್ಟಣೆ ಇರುವ ಕಡೆ ಅವಶ್ಯಕತೆಗಳನ್ನು (ನೀಡ್) ಕಂಡು ಹಿಡಿದು, ಹೊಸ ಪರ್ಮಿಟ್‌ಗಳಿಗೆ ಆಹ್ವಾನ ನೀಡಬೇಕೆಂದಿದೆ. ಆದರೆ ಯಾವುದೇ ಸಾರಿಗೆ, ಪೋಲೀಸ್ ಅಥವಾ ಜಿಲ್ಲಾಧಿಕಾರಿಗಳಾಗಲೀ, ಶಾಸಕರಾಗಲೀ ತಾವಾಗಿ ಯಾವುದೇ ಹೊಸ ಪರ್ಮಿಟ್ ಕೊಟ್ಟು ಜನರ ಸಂಕಷ್ಟ ಪರಿಹರಿಸಿದ್ದಾರೆಯೆ?

ಸರ್ಕಾರ ಕೂಡಲೇ, ಒಂದೋ ಜಿಲ್ಲೆಯ

(೫ನೇ ಪುಟಕ್ಕೆ)

ಶಂಕರನಾರಾಯಣ ಭಟ್, ಸಂಚಾಲಕರು,
ರಸ್ತೆ ಬಳಕೆದಾರರ ವೇದಿಕೆ, ಬಾಳೆಹೊನ್ನೂರು.

ಹಾಗಲ ಕಾಯಿ : ತಿನ್ನಲು ಕಹಿ, ಪರಿಣಾಮ ಸಿಹಿ

(೨ನೇ ಪುಟದಿಂದ)

ವಿಕಾರ, ಕ್ರಿಮಿರೋಗ, ಶ್ವಾಸಕಾಸ, ಪ್ರಮೇಹ, ಮೂತ್ರವಿಕಾರ, ಚರ್ಮ ವಿಕಾರ ಮತ್ತು ಜ್ವರರೋಗಗಳಲ್ಲಿ ಉತ್ತಮ ಪರಿಣಾಮ ಬೀರಬಲ್ಲುದು. ಮೇಲಿನ ವಿಕಾರಗಳಲ್ಲಿ ಕಾಯಿಯನ್ನು ಪಥ್ಯವಾಗಿಯೂ ಉಪಯೋಗಿಸಬಹುದು. ಸ್ವರಸ ಮುಂತಾದ ಕಲ್ಪಗಳ ರೂಪದಲ್ಲಿಯೂ ನೀಡಬಹುದು. ಅಥವಾ ಕ್ರಿಮಿ ವಿಕಾರ ಇತ್ಯಾದಿಗಳಲ್ಲಿ ಪತ್ರದ ಸ್ವರಸವನ್ನಾದರೂ ನೀಡಬಹುದು.

ಜನಪದದಲ್ಲಿಯೂ ಹಾಗಲವನ್ನು ಔಷಧಿಯಾಗಿ ಸ್ವೀಕರಿಸಿದ್ದನ್ನು ಕಾಣಬಹುದು. ಜಾನುವಾರುಗಳಲ್ಲಿ ಕ್ರಿಮಿ ವಿಕಾರಕ್ಕೆ ಹಾಗಲಸೊಪ್ಪು, ಬೆಳ್ಳುಳ್ಳಿಯೊಡನೆ ಜಜ್ಜಿ ನೀಡಿದಾಗ ಜೀವಂತ ಹುಳಗಳು ಹೊರಹಾಕಲ್ಪಡುತ್ತವೆ. ಮನುಷ್ಯರಲ್ಲಿಯೂ ಎಲೆಗಳ ರಸವನ್ನು ವಾಂತಿ ಮಾಡಿಸಲು ಉಪಯೋಗಿಸುವರು. ಇದರಿಂದ ಪಿತ್ತ ಶಮನವಾಗುತ್ತದೆ. ಎಲೆಯ ರಸ ಕೈಕಾಲುಗಳಿಗೆ ಹಚ್ಚಿದಾಗ ಸ್ಥಾನಿಕವಾದ ಉರಿ, ತುರಿಕೆಗಳು ಶಮನವಾಗುತ್ತವೆ. ಅಲ್ಲದೆ ರಸವನ್ನು ಕಾಳು ಮೆಣಸಿನೊಡನೆ ಅರೆದು ಕಣ್ಣಿನ ಸುತ್ತಲೂ ರೆಪ್ಪೆಗಳಿಗೆ ಹಚ್ಚಿದರೆ, ರಾತ್ರ್ಯಂಧತೆ ನಾಶವಾಗುವ ಉದಾಹರಣೆಗಳೂ ಲಭ್ಯವಾಗುತ್ತವೆ. ಅಂತೆಯೇ ಕಾಮಾಲೆರೋಗದಲ್ಲಿ ಎಲೆಯ ರಸದ ಪಾನ ಅತ್ಯಂತ ದಿವ್ಯೌಷಧ.

'ಆಯುರ್ವೇದ ಕೇಸರಿ'
ಡಾ|| ಎಸ್. ಎಫ್. ಹಿರೇಮಠ
ಹುಬ್ಬಳ್ಳಿ

ಸ್ತ್ರೀಯರ ರಜೋವಿಕಾರಗಳಲ್ಲಿಯೂ ಹಾಗಲಬಳ್ಳಿಯ ರಸ ಉಪಯುಕ್ತವಾಗಿದೆ. ಮೂತ್ರವಿಕಾರಗಳಲ್ಲಿ, ಮಧುಮೇಹದಲ್ಲಿ ಹಾಗಲಕಾಯಿಯನ್ನು ಪಥ್ಯಾಹಾರವಾಗಿ ಬಳಸುವುದು ಅತ್ಯಂತ ಯೋಗ್ಯವಾಗಿದೆ. ಆದರೆ ಈ ರೋಗಗಳಲ್ಲಿ ಔಷಧವಾಗಿ ಬಳಸಿದಾಗ ಕಂಡುಬರುವ ಫಲಿತಾಂಶಗಳು ಜಿಜ್ಞಾಸೆಗೊಳಪಟ್ಟಿವೆ.

ಹೀಗೆ ಸರ್ವ ರೋಗಗಳಲ್ಲಿಯೂ ಸಂಜೀವಿನಿಯಂತಿರುವ ಅಮೂಲ್ಯ ಔಷಧ ಹಾಗೂ ಆಹಾರ ವಸ್ತು ಹಾಗಲಕಾಯಿಯ ಮಹತ್ವವನ್ನು ಎಲ್ಲರೂ ಅರಿತುಕೊಳ್ಳಬೇಕು. ಸೃಷ್ಟಿಯು ಇದನ್ನು ಅತ್ಯಂತ ಕಹಿಯಾಗಿ ದೂರವಿರಿಸಿದೆ ಅದನ್ನೂ ಬಳಸಬೇಕು. ತಮ್ಮ ತಮ್ಮ ಕೈತೋಟದಲ್ಲಿ ಇದನ್ನು ಬೆಳೆಸಬೇಕು. ಆಗ ಮಾತ್ರ ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಈ ತರಕಾರಿ–ಔಷಧ ಜನಪ್ರಿಯವಾಗುವುದಲ್ಲದೆ ನಮ್ಮ ಮುಂದಿನ ಜನಾಂಗಕ್ಕೆ ಇಲ್ಲವಾಗುವ ಭೀತಿಯಿಂದಲೂ ಪಾರಾಗಬಹುದು.

(ಸೌಜನ್ಯ: 'ವೈದ್ಯ ವಾರ್ತಾ' ಮಾಸ ಪತ್ರಿಕೆ, ಮೈಸೂರು)

ಓದುಗರ ಪತ್ರಗಳು

ಕೊಪ್ಪದ ನಲ್ಲಿ ನೀರು ಶುದ್ಧೀಕರಿಸಿದ್ದೆ?

ಮಾನ್ಯರೆ,

ಕೊಪ್ಪದಲ್ಲಿ ನಲ್ಲಿ ನೀರನ್ನು ಆರೋಗ್ಯ ಇಲಾಖೆ ಸೂಚಿಸಿರುವಂತೆಯೇ, ಪಟಿಕ ಮತ್ತು ಬಿಳಿಚಿನ ಪುಡಿಗಳಿಂದ ಶುದ್ಧೀಕರಿಸಿ ಸರಬರಾಜು ಮಾಡುತ್ತಿರುವುದಾಗಿ ಪುರಸಭೆಯವರು ತಿಳಿಸಿದ್ದಾರೆಂದು ನಿಮ್ಮ ಪತ್ರಿಕೆಯಲ್ಲಿ ಈಚಿಗೆ ಪ್ರಕಟವಾಗಿದೆಯಷ್ಟೆ. ಆದರೆ ನಲ್ಲಿ ನೀರಿನಲ್ಲಿ ಕಶ್ಮಲಗಳು ಮಾತ್ರ ಬಹಳ ಕಮ್ಮಿಯಾದಂತೇನೂ ಕಾಣುವುದಿಲ್ಲ. ಈ ವರ್ಷದ ಮೇ ತಿಂಗಳಲ್ಲಿದ್ದಂಥ ನೀರಲ್ಲವಾದರೂ ಹಿಂದಿನ ವರ್ಷಗಳಲ್ಲೆಲ್ಲ ಈ ಸಮಯದಲ್ಲಿ ಹೇಗಿರುತ್ತಿತ್ತೋ ಹಾಗೇ ಇದೆ. ಅಲ್ಲದೆ ಅದರಲ್ಲಿ ಕ್ಲೋರೀನಿನ ವಾಸನೆಯೂ ಇಲ್ಲ. (ಬಿಳಿಚಿನ ಪುಡಿ ಹಾಕಿದ್ದರೆ ಕ್ಲೋರೀನಿನ ವಾಸನೆ ಇರಬೇಕಲ್ಲವೆ?)

ಹಾಗಾದರೆ ಶುದ್ಧೀಕರಿಸುತ್ತಿರುವುದು ನಿಜವೆ? ಈ ಬಗ್ಗೆ ಸಂಬಂಧಪಟ್ಟವರು ಸ್ಪಷ್ಟೀಕರಿಸಲೆಂದು ಆಶಿಸುತ್ತೇನೆ.

—ಒಬ್ಬ ಗೃಹಿಣಿ, ಕೊಪ್ಪ.

ಆಶ್ವಾಸನೆಯೂ ಮಂತ್ರಿಗಳ ಜೊತೆಗೇ ಹೋಯಿತೆ?

ಮಾನ್ಯರೆ,

ಕೊಪ್ಪ–ಕೆಸವೆ–ಸಿದ್ಧರಮಠ ರಸ್ತೆಯಲ್ಲಿ ಮುಸುರಿಹಳ್ಳದ ಸೇತುವೆಯನ್ನು ಹಿಂದಿನ ಲೋಕೋಪಯೋಗಿ ಮಂತ್ರಿ ಹೆಚ್. ಡಿ. ದೇವೇಗೌಡರು ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದಾಗ ಈ ರಸ್ತೆಗೆ ಟಾರು ಹಾಕಿಸಬೇಕೆಂದು ಗ್ರಾಮಸ್ಥರು ಬೇಡಿಕೆ ಮಂಡಿಸಿದ್ದಕ್ಕೆ, ೧೨ ಕಿ.ಮೀ. ರಸ್ತೆಯಲ್ಲಿ ೬ ಕಿ.ಮೀ. ದೂರಕ್ಕಾದರೂ ಈ ವರ್ಷ ಟಾರು ಹಾಕಿಸಿ ಕೊಡುವುದಾಗಿ ಮಂತ್ರಿಗಳು ಭರವಸೆಕೊಟ್ಟಿದ್ದರು. ಆದರೆ ಈವರೆಗೂ ಯಾವುದೇ ಕಾಮಗಾರಿ ನಡೆಯುವ ಸೂಚನೆ ಕಂಡುಬಂದಿಲ್ಲ.

ಮಂತ್ರಿಗಳು ತಮ್ಮ ಸ್ಥಾನದಿಂದ ವಾಪ್ಸ ಹೋದ ಹಾಗೆ ಈ ಆಶ್ವಾಸನೆಯೂ ಕೂಡ ಹಿಂದೆ ಹೋಗಿದೆಯೋ ಗೊತ್ತಿಲ್ಲ. ಈ ಬಗ್ಗೆ ಶಾಸಕರು ಉತ್ತರಿಸಬೇಕಾಗಿದೆ.

—ಗ್ರಾಮಸ್ಥರು, ಕೆಸವೆ-ಸಿದ್ಧರಮಠ.

ಶಿಕ್ಷಕರ ದಿನಾಚರಣೆ

ಲಯನ್ಸ್ ಕ್ಲಬ್‌ನಲ್ಲಿ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆ ಕ್ಲಬ್ ಅಧ್ಯಕ್ಷ ಡಾ|| ಮೋಹನ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಿರಿಯ ಕಾಲೇಜು ಪ್ರಾಂಶುಪಾಲ ಎನ್.ಮೋಹನದಾಸ ಭಟ್ ಮತ್ತು ಸಹಾಯಕ ಶಿಕ್ಷಣಾಧಿಕಾರಿ ಹೆಚ್. ಎಂ. ಮಲ್ಲಯ್ಯ ಅತಿಥಿಗಳಾಗಿದ್ದರು.

ಕೊಪ್ಪ ತಾ||ನಲ್ಲಿ ಈ ವರ್ಷ ನಿವೃತ್ತರಾಗಿರುವ ಅಧ್ಯಾಪಕರಾದ ಮಂಜು ಭಟ್ಟ, ಪಾವ್ಲ್ ಗೊನ್ಸಾಲ್ವಿಸ್, ಎಸ್. ಗಂಗಾಧರಯ್ಯ ಅವರುಗಳನ್ನು ಲಯನ್ ಪಿ. ಜಿ. ಗುರ್ಜರ್‌ರವರು ಸನ್ಮಾನಿಸಿದರು.

ರೋಟರಿ ಕ್ಲಬ್‌ನಲ್ಲಿ

ಜೆ.ಎಂ.ಜೆ. ಟಾಕೀಸ್ ಆವರಣದಲ್ಲಿರುವ ರೋಟರಿ ಕ್ಲಬ್ ಕಛೇರಿಯಲ್ಲಿ ಸೆ. ೧೦ರಂದು ಕ್ಲಬ್ ಅಧ್ಯಕ್ಷ ಕೆ. ವಿಜಯ ಅಜಿಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಇದೇ ಮೇಲ್ಕಂಡ ಉಪಾಧ್ಯಾಯರುಗಳನ್ನು ಸನ್ಮಾನಿಸಲಾಯಿತು. ಪದವೀಧರ ಶಾಲಾ ತನಿಖಾಧಿಕಾರಿ ಎನ್.ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ಕೆ.ಎಸ್.ಶಾಂತಾರಾಂ ಎಲ್ಲರನ್ನೂ ವಂದಿಸಿದರು.

ಮಟ್ಕಾ ಪತ್ತೆ: ೬ ಜನರ ಬಂಧನ

ನ.ರಾ.ಪುರ: ಬಾಳೆಹೊನ್ನೂರು ಮತ್ತು ಸಂಗಮೇಶ್ವರಪೇಟೆಗಳಲ್ಲಿ ಈಚೆಗೆ ಮಟ್ಕಾ ಹಾವಳಿ ಹೆಚ್ಚಿದ್ದು, ನ.ರಾ.ಪುರದ ಸಬ್ ಇನ್ಸ್‌ಪೆಕ್ಟರ್ ಬಿ.ಜೆ.ಭಂಡಾರಿ ಆರು ಮಂದಿಯನ್ನು ಬಂಧಿಸಿ, ತಲೆ ಮರೆಸಿಕೊಂಡಿರುವ ಬಾಳೆಹೊನ್ನೂರಿನ ಪಾಂಡುರಂಗ ಕಾಮತ್ ಎಂಬವನಿಗಾಗಿ ಹುಡುಕುತ್ತಿದ್ದಾರೆಂದು ವರದಿಯಾಗಿದೆ.

ಬಂಧಿತರಾದ ಜಾರ್ಜ್. ಫ್ರಾನ್ಸಿಸ್, ಇಲಾರಿ, ಮೊೖದಿನ್ ಬ್ಯಾರಿ, ಪ್ರಶಾಂತ್ ಮತ್ತು ವಿಟ್ಟು ಎಂಬವರನ್ನು ನ.ರಾ.ಪುರ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ.

ರೈತ ವಿದ್ಯಾರ್ಥಿ ಒಕ್ಕೂಟ

ಕೊಪ್ಪ: ಇಲ್ಲಿನ ರೈತ ವಿದ್ಯಾರ್ಥಿ ಒಕ್ಕೂಟದ ಸಭೆ ಸೆ. ೧೨ರಂದು ನಡೆಯಿತು. ಕೆಳಕಂಡವರು ಪದಾಧಿಕಾರಿಗಳಾಗಿ ಆಯ್ಕೆಯಾದರು: ಬಿ.ಎಂ.ಉಮೇಶ್ (ಅಧ್ಯಕ್ಷ), ಹರೀಶ್ ಶ್ಯಾಂ (ಉಪಾಧ್ಯಕ್ಷ), ಎಂ. ವಿ. ಪ್ರಕಾಶ್ (ಕಾರ್ಯದರ್ಶಿ), ಸತ್ಯನಾರಾಯಣ (ಸಹಕಾರ್ಯದರ್ಶಿ), ಎಲ್. ಎಂ. ಪ್ರಕಾಶ್ (ಖಜಾಂಚಿ)

ನೆಮ್ಮಾರಿನಲ್ಲಿ ಗ್ರಾಮಸಂದರ್ಶನ

ಶೃಂಗೇರಿ: ಈ ತಾಲ್ಲೂಕಿನ ನೆಮ್ಮಾರು, ಕಿಗ್ಗ, ಕೆರೆ ಮತ್ತು ವಿದ್ಯಾರಣ್ಯಪುರ ಗ್ರಾಮ ಪಂಚಾಯ್ತಿಗಳಿಗಾಗಿ ನೆಮ್ಮಾರಿನಲ್ಲಿ ಸೆ.೨[illegible]ರಂದು ಮಧ್ಯಾಹ್ನ ೩ ಗಂಟೆಗೆ ಗ್ರಾಮ ಸಂದರ್ಶನ ಕಾರ್ಯಕ್ರಮ ನಡೆಯುತ್ತದೆ. ಜಿಲ್ಲಾಧಿಕಾರಿ, ಶಾಸಕರು, ಜಿಲ್ಲೆ ಮತ್ತು ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸುತ್ತಾರೆ.

ಗ್ರಾಮಸ್ಥರು ತಮ್ಮ ಕುಂದು ಕೊರತೆಗಳ ಬಗ್ಗೆ ತಾ|| ಮಟ್ಟದ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ತಿಳಿಸಿ, ಸಭೆಯಲ್ಲಿ ಹಾಜರಿದ್ದು ಸಮಸ್ಯೆಗೆ ಪರಿಹಾರ ಪಡೆಯಬೇಕೆಂದು ಕೋರಲಾಗಿದೆ.

ಶೃಂಗೇರಿಯಲ್ಲಿ ಶರನ್ನವರಾತ್ರಿ

ಇಲ್ಲಿನ ಶ್ರೀಮಠದಲ್ಲಿ ಪ್ರತಿ ವರ್ಷದಂತೆ ಶರನ್ನವರಾತ್ರಿ ಮಹೋತ್ಸವ ಸೆ. ೨೮ರಿಂದ ಅ. ೫ರವರೆಗೆ ನಡೆಯುತ್ತದೆ. ಈ ಸಂದರ್ಭದಲ್ಲಿ ಇಬ್ಬರು ಜಗದ್ಗುರುಗಳೂ ಹಾಜರಿರುತ್ತಾರೆಂದು ತಿಳಿದು ಬಂದಿದೆ.

ಒಂದು ಕ್ಷುಲ್ಲಕ ಕಾನೂನಿನ ತೊಡಕು

(೩ನೇ ಪುಟದಿಂದ)

ಎಲ್ಲಾ ರಸ್ತೆಗಳನ್ನೂ ರಾಷ್ಟ್ರೀಕರಣಗೊಳಿಸಬೇಕು; ಇಲ್ಲವೇ ಕಾನೂನನ್ನು ತಿದ್ದುಪಡಿ ಮಾಡಿಯಾದರೂ, ಅಲ್ದೂರಿಂದ ವಸ್ತಾರೆಯ ಮೂಲಕ ನೇರವಾಗಿ ಚಿಕ್ಕಮಗಳೂರು ತಲುಪಲು ಖಾಸಗಿ ಬಸ್ಸುಗಳಿಗೂ ಅವಕಾಶ ಮಾಡಿ ಕೊಡಬೇಕು. ಪ್ರಯಾಣಿಕರಿಗೆ ತುರ್ತು ಅಗತ್ಯವಿರುವ ಹೊಸ ಮಾರ್ಗಗಳಿಗೆ ಪರ್ಮಿಟ್ ನಿರಾಕರಿಸುವುದಂತೂ ಜನ[illegible] ಮೂಲಭೂತ ಹಕ್ಕಿಗೆ ಕೊಡಲಿ ಏಟು ಹಾ[illegible]ದಂತೆ.

ಇಂಥ ಸಮಸ್ಯೆ ರಾಜ್ಯಾದ್ಯಂತ ಅನೇ[illegible]ಕಡೆ ಇರಬಹುದು. ಕಾನೂನಿನ ಇಂಥ ಸ[illegible] ತೊಡಕಿನಿಂದಾಗಿ ಜನ ಕೆಟ್ಟ ರಸ್ತೆಗಳ[illegible] ಮೈ ಕೈ ನೋಯಿಸಿಕೊಂಡು ತಿರುಗಾ[illegible] ಬೇಕಾಗಿರುವುದು, ಹೊಸ ಪರ್ಮಿಟ್‌ಗಳಿಲ್ಲ[illegible] ಹಾಲಿ ಇರುವ ಬಸ್ಸುಗಳಲ್ಲೇ ಕಿಕ್ಕಿರಿದು [illegible] ಯಾಣಿಸಬೇಕಾಗಿರುವುದು ಶೋಚನೀಯ[illegible] ಸಾರಿಗೆ ಪ್ರಾಧಿಕಾರದ ಸದಸ್ಯರುಗಳೂ [illegible] ಸಕರುಗಳೂ ಈ ವಿಷಯವನ್ನು ಸರ್ಕಾ[illegible] ವರೆಗೆ ಕೊಂಡೊಯ್ದು, ಸಮಸ್ಯೆ ಪರಿಹ[illegible] ಬೇಕಾಗಿದೆ.

ವಿದ್ಯಾರ್ಥಿಗಳ ಪ್ರತಿಭಟನೆ

(೧ನೇ ಪುಟದಿಂದ)

ಕಳೆದೆರಡು ವರ್ಷವೂ ಮಲೆನಾಡು ಕ್ರೀಡಾಕೂಟಕ್ಕೆ (ಎಂ. ಜಿ. ಎಸ್.) ಕಾಲೇಜಿನ ತಂಡವನ್ನೇ ಕಳಿಸಿಲ್ಲ. ಈ ವರ್ಷವಾದರೂ ಅರ್ಹ ಕ್ರೀಡಾ ಪಟುಗಳನ್ನು ಗುರ್ತಿಸಿ ತಂಡ ಕಳಿಸುವ ವ್ಯವಸ್ಥೆಯಾಗಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ವಾಚನಾಲಯ, ಎನ್.ಸಿ.ಸಿ.

ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ ವೃತ್ತಪತ್ರಿಕೆಗಳನ್ನಿಡಲು ವಾಚನಾಲಯವಿಲ್ಲ (ಮಧ್ಯೆ ಸ್ವಲ್ಪ ಕಾಲ ಮಾತ್ರ ಕಲ್ಪಿಸಲಾಗಿತ್ತು) ಎನ್. ಸಿ.ಸಿ., ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.)ಗಳಿಲ್ಲ. ಒಟ್ಟಿನಲ್ಲಿ ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಬೆಳವಣಿಗೆಗಳಿಗೆ ಬೇಕಾದ, ಕಾಲೇಜೆನ್ನಿಸಿಕೊಳ್ಳಲು ಇರಬೇಕಾದ ಯಾವುದೇ ಸೌಕರ್ಯ, ವ್ಯವಸ್ಥೆಗಳೂ ಇಲ್ಲ. ಇವನ್ನೆಲ್ಲ ಕೂಡಲೇ ಏರ್ಪಡಿಸಬೇಕು ಎಂದು ವಿದ್ಯಾರ್ಥಿಗಳು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: ೧೫–೭–೮೪

('ಏವೀಶಂ' ಅವರಿಂದ)

ಸರಕು: ೩೧೦೦ ರಿಂದ ೩೫೩೦

ಬೆಟ್ಟೆ: ೨೦೦೦ ರಿಂದ ೨೫೯೬

ಗೊರಬಲು: ೮೭೦ ರಿಂದ ೯೦೦

ಈ ವಾರ ಅಡಿಕೆ ಧಾರಣೆ ಗಣನೀಯವಾಗಿ ಏರಿದೆ. ಹಳೆಯ ದಾಸ್ತಾನು ಕಡಿಮೆ ಇದ್ದು ಹೊರಗಿನಿಂದ ಬೇಡಿಕೆ ಇರುವುದರಿಂದ ಬೆಲೆ ಏರಿದೆ. ಹೊಸ ಅಡಿಕೆ ಮಾರುಕಟ್ಟೆಗೆ ಇನ್ನೂ ಸರಿಯಾಗಿ ಬರುತ್ತಾ ಇಲ್ಲ. ಆದ್ದರಿಂದ ಮುಂದಿನ ವಾರವೂ ಹೆಚ್ಚೂ ಕಡಿಮೆ ಇದೇ ಧಾರಣೆ ಇರುವುದೆಂದು ನಿರೀಕ್ಷಿಸಬಹುದು.

ಭೂ ಸುಧಾರಣೆಯ ಪರಿಹಾರಕ್ಕಾಗಿ ಅರ್ಜಿ ಆಹ್ವಾನ

ಶೃಂಗೇರಿ: ಭೂ ಸುಧಾರಣೆ ಕಾನೂ[illegible]ನ್ವಯ ಜಮೀನು ಕಳೆದುಕೊಂಡಿ[illegible] ಮಾಜಿ ಭೂ ಮಾಲೀಕರಿಗೆ ಪರಿಹಾರ ಪಾ[illegible]ಸುವ ಬಗ್ಗೆ ೧೯೮೪–೮೫ ನೇ ಸಾಲಿಗೆ [illegible]ದಾನ ಬಿಡುಗಡೆಯಾಗಿದ್ದು, ಮಾಜಿ ಮಾಲೀಕರು ಅವಶ್ಯಕ ದಾಖಲಾತಿಗಳ[illegible]ದಿಗೆ ಶೃಂಗೇರಿ ತಾ|| ತಹಸೀಲ್ದಾರರಿಗೆ [illegible]ಸಲ್ಲಿಸಿ ಪರಿಹಾರ ಪಡೆಯಬಹುದೆಂದು [illegible]ಸೀಲ್ದಾರರ ಪ್ರಕಟಣೆ ತಿಳಿಸಿದೆ.

'ಆಂಧ್ರ ಪ್ರದೇಶದ ಜನತೆಯು ಪ್ರ[illegible] ಪ್ರಭುತ್ವದ ಹೋರಾಟದೊಡನೆ ಐಕ[illegible] ಪ್ರದರ್ಶಿಸಲು' ರಾಷ್ಟ್ರೀಯ ವಿರೋಧ [illegible]ಗಳು ಸೆ. ೨೦ರಂದು ಪುನಃ ಭಾರತ ಬ[illegible]ಗೆ ಕರೆ ನೀಡಿವೆ. ಅಂದೇ ಆಂಧ್ರ ಪ್ರ[illegible]ದಲ್ಲಿ ಎನ್.ಟಿ.ಆರ್. ಮತ್ತು ಭಾಸ್ಕರ[illegible] ನಡುವೆ ಬಲಾಬಲ ಪ್ರದರ್ಶನಕ್ಕಾಗಿ [illegible] ವಿಧಾನಸಭೆ ಅಧಿವೇಶನ ನಿಗದಿಯಾ[illegible]

ಕೊಪ್ಪಕ್ಕೆ ಸೆಶನ್ಸ್ ನ್ಯಾಯಾಧೀಶರ ಭೇಟಿ

(೧ನೇ ಪುಟದಿಂದ)

"ಅಗತ್ಯದ ಬಗ್ಗೆ ಅನುಮಾನವಿಲ್ಲ"

"ಇಲ್ಲಿಗೊಂದು ನ್ಯಾಯಾಲಯದ ಅಗತ್ಯವನ್ನು ಯಾರೂ ತಳ್ಳಿ ಹಾಕುವಂತೆಯೇ ಇಲ್ಲ. ಆದರೆ, ನ.ರಾ.ಪುರದ ಕೋರ್ಟನ್ನೂ ಉಳಿಸಿ, ಜನರ ಸೌಕರ್ಯದ ದೃಷ್ಟಿಯಿಂದ ಕೊಪ್ಪಕ್ಕೂ ಒಂದು ಕೋರ್ಟು ಕೊಡಬಹುದೆ ಎಂಬುದನ್ನು ನಿರ್ಧರಿಸಬೇಕಾಗಿರುವುದು ಮಾತ್ರ ಸರ್ಕಾರವೇ" ಎಂದ ಅವರು ಶ್ರೇಷ್ಠ ನ್ಯಾಯಾಲಯಕ್ಕೆ ತಮ್ಮ ವರದಿಯನ್ನು ಈ ತಿಂಗಳ ಕೊನೆಯ ಹೊತ್ತಿಗೆ ಕಳಿಸುವುದಾಗಿ ಹೇಳಿದರು.

ಊರಿನ ಹಿತಕ್ಕಾಗಿ ಇಷ್ಟೊಂದು ಜನ ಒಮ್ಮತದಿಂದ ಮುತುವರ್ಜಿ ವಹಿಸುತ್ತಿರುವ ಬಗ್ಗೆ ಅವರು ಬಹಳವಾಗಿ ಮೆಚ್ಚಿಗೆ ವ್ಯಕ್ತಪಡಿಸಿದರು.

ಮುಂದಿನ ಹೆಜ್ಜೆ

ಮುಂದಿನ ಹೆಜ್ಜೆಯಾಗಿ, ಇಂಥದೇ ವಿಶಾಲ ಪ್ರಾತಿನಿಧ್ಯದ ಒಂದು ನಿಯೋಗ, (ತಂಬದ್‌ರವರ ವರದಿ ಹೋದ ನಂತರ) ಶ್ರೇಷ್ಠ ನ್ಯಾಯಾಲಯಕ್ಕೂ ಸರ್ಕಾರಕ್ಕೂ ಹೋಗಿ ನ್ಯಾಯಾಲಯ ಸ್ಥಾಪನೆಗಾಗಿ ಒತ್ತಾಯಿಸಲಿದೆ.